| | | | |
|---|---|---|---|
| Publication: | **Prajavani** | Edition: | **Bangalore** |
| Published Date: | **06 Aug 2015** | Page No.: | **3** |
| | | Display: | **1/1** |


# ಶಾಲೆಗೆ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟಿಸಿಎಸ್ ಐ.ಟಿ ವಿಜ್ 2015 ಬೆಂಗಳೂರು ಆವೃತ್ತಿಯ ಅಂತರ ಶಾಲಾ ಮಟ್ಟದ ಸ್ಪರ್ಧೆಯಲ್ಲಿ ಇಂದಿರಾ ನಗರದ ನ್ಯಾಷನಲ್ ಪಬ್ಲಿಕ್ ಶಾಲೆಯ ಮಕ್ಕಳು ಜಯಶಾಲಿಯಾಗಿದ್ದಾರೆ.

ಬುಧವಾರ ನಗರದ ಚೌಡಯ್ಯ ಸ್ಮಾರಕ ಭವನದಲ್ಲಿ ನಡೆದ ಸ್ಪರ್ಧೆಯ ಅಂತಿಮ ಸುತ್ತಿನಲ್ಲಿ ನ್ಯಾಷನಲ್ ಶಾಲೆಯ ಶ್ಯಾಮ್ ಗೋಪಾಲ್ ಕಾರ್ತಿಕ್ ಮತ್ತು ಅಖಿಲ್ ಸಿದ್ಧಾರ್ಥ ವಿಜೇತರಾದರು. ಅವರಿಗೆ ಟ್ರೋಫಿ ಹಾಗೂ ಐ-ಪ್ಯಾಡ್ ವಿತರಿಸಲಾಯಿತು.

ಇದರೊಂದಿಗೆ ಅವರು ಮುಂಬೈನಲ್ಲಿ ನಡೆಯಲಿರುವ ರಾಷ್ಟ್ರೀಯ ಮಟ್ಟದ ಸ್ಪರ್ಧೆಯಲ್ಲಿ ಬೆಂಗಳೂರು ವಲಯವನ್ನು ಪ್ರತಿನಿಧಿಸಲಿದ್ದಾರೆ.

ಕೋರಮಂಗಲದ ನ್ಯಾಷನಲ್ ಪಬ್ಲಿಕ್ ಶಾಲೆಯ ಅಂಕಿತ್ ಶಿವ ಮತ್ತು ವಿಕ್ರಂ ಶೇಖರ್ ದ್ವಿತೀಯ ಸ್ಥಾನಕ್ಕೆ ತೃಪ್ತಿ ಪಡಬೇಕಾಯಿತು.

ಅಂತಿಮ ಸುತ್ತಿಗೆ ಆರು ತಂಡಗಳು ಆಯ್ಕೆಯಾಗಿದ್ದವು.